ಸಾಕ್ಷಿಯನ್ನು ಈ ದಿನ ದಿನಾಂಕ 27.08.2024 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಬಿ ಎಮ್ ವಕೀಲರಿಂದಃ ಪ್ರತಿವಾದಿ ಪರವಾಗಿಃ**

**3.** ವಾದಿಯು ನೋಂದಾಯಿತ ಖಾಸಗಿ ನಿಯಮಿತ ಸಂಸ್ಥೆಯಾಗಿರುತ್ತದೆ ಎಂದರೆ ಸರಿ. ವಾದಿ ಸಂಸ್ಥೆಗೆ ಸಂಬಂಧಪಟ್ಟ ನೋಂದಾವಣೆಯ ಪ್ರಮಾಣ ಪತ್ರವನ್ನು ನಾವು ಹಾಜರು ಪಡಿಸಿಲ್ಲ. ವಾದಿಗೆ ಸಂಬಧಪಟ್ಟ ಕ್ರಮನಿಬಂಧನೆ ದಾಖಲೆ ಇರುತ್ತದೆ. ಸದರಿ ಕ್ರಮನಿಬಂಧನೆ ದಾಖಲೆಯನ್ನು ಈ ದಾವೆಯಲ್ಲಿ ನಾವು ಹಾಜರು ಪಡಿಸಿಲ್ಲ. ಸದರಿ ದಾಖಲೆಯನ್ನು ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ. ವಾದಿ ಸಂಸ್ಥೆಯಲ್ಲಿ ಐದು ಜನ ನಿರ್ದೇಶಕರು ಇರುತ್ತಾರೆ. ನಾನು ವಾದಿ ಸಂಸ್ಥೆಯ ನಿರ್ದೇಶಕ ಅಲ್ಲ. ವಾದಿ ಸಂಸ್ಥೆಯ ನಿರ್ದೇಶಕರೆಲ್ಲಾ ಸೇರಿ ನಿರ್ಧರಿಸಿ, ಈ ಕೇಸನಲ್ಲಿ ನನಗೆ ಅಥೃೈಜೆಶನ ಲೇಟರ್ ನೀಡಬೇಕು ಎಂದರೆ ಸರಿ. ವಾದಿ ಸಂಸ್ಥೆಯಲ್ಲಿ ನಾನು ಪ್ರತಿನಿಧಿಸುವ ಬಗ್ಗೆ ನಿಪಿ-1 ದಾಖಲೆ ಹೊರತು ಪಡಿಸಿ, ಬೇರೆ ಯಾವುದೇ ದಾಖಲೆ ಇಲ್ಲ. ನಿಪಿ-1 ದಾಖಲೆಯಲ್ಲಿ ವಾದಿ ಸಂಸ್ಥೆಯ ಎಲ್ಲ ನಿರ್ದೇಶಕರ ಸಹಿಗಳು ಇಲ್ಲ ಎಂದರೆ ಸರಿ. ನಿಪಿ-1 ದಾಖಲೆಯ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪತ್ರವನ್ನು ಜಿಲ್ಲಾ ಕಾನೂನು ಪ್ರಾಧಿಕಾರದ ಮುಂದೆ ಹಾಜರಾಗಲು ನನಗೆ ನೀಡಿದ್ದು ಎಂದರೆ ಸರಿ. ಸದರಿ ದಾಖಲೆಯಲ್ಲಿ ಈ ನ್ಯಾಯಾಲಯದ ಮುಂದೆ ವಾದಿ ಸಂಸ್ಥೆಯನ್ನು ಪ್ರತಿನಿಧಿಸುವ ಬಗ್ಗೆ ನನಗೆ ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ವಾದಿ ಸಂಸ್ಥೆಯನ್ನು ಈ ದಾವೆಯಲ್ಲಿ ಪ್ರತಿನಿಧಿಸುವ ಬಗ್ಗೆ ನನಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ನಾನು ಈ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಸಂಸ್ಥೆಯನ್ನು ಈ ದಾವೆಯಲ್ಲಿ ಪ್ರತಿನಿಧಿಸುವ ಬಗ್ಗೆ ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿ ಸಂಸ್ಥೆಯ ಪರವಾಗಿ ಈ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ಅಧಿಕಾರ ಇಲ್ಲ ಮತ್ತು ಈ ಕಾರಣದಿಂದ ವಾದಿ ಸಂಸ್ಥೆಗೆ ಸಂಬಂಧಪಟ್ಟ ನೋಂದಾವಣೆ ಪ್ರಮಾಣ ಪತ್ರ ಮತ್ತು ಕ್ರಮನಿಬಂಧನೆ ದಾಖಲೆಯನ್ನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

**4.** ನಾನು ವಾದಿ ಸಂಸ್ಥೆಯಲ್ಲಿ ಎಂಟು ವರ್ಷಗಳಿಂದ ರಿಕವರಿ ಮ್ಯಾನೇಜರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ವಾದಿ ಸಂಸ್ಥೆಯಲ್ಲಿ ರಿಕವರಿ ಮ್ಯಾನೇಜರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ. ವಾದಿ ಸಂಸ್ಥೆಯ ರಿಕವರಿ ವಿಷಯ ಹೊರತುಪಡಿಸಿ ನನಗೆ ಯಾವುದೇ ಬೇರೆ ವಿಷಯಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ.

**5.** ವಾದಿ ಸಂಸ್ಥೆಯಿಂದ ಯಾವುದೇ ವಸ್ತುಗಳನ್ನು ಸರಬರಾಜು ಮಾಡಲು ಆ ಬಗ್ಗೆ ಕೋರಿಕೆ ಬರಬೇಕು ಮತ್ತು ಆ ಬಗ್ಗೆ ಕೊಟೇಶನ ಮತ್ತು ವರ್ಕ ಆರ್ಡರ ಇರುತ್ತದೆ ಎಂದರೆ ಸರಿ. ಕೋಟೇಶನ ನೀಡಿದ ನಂತರ ಅದರ ಅಪ್ರುವಲ್‌ಗೆ ಎರಡು ಪಕ್ಷಗಾರರ ಸಹಿಗಳು ಬೇಕು ಎಂದರೆ ಸರಿಯಲ್ಲ. ಕೋಟೇಶನ ನೀಡಿದ ನಂತರ ಪ್ರತಿವಾದಿ ನಿರ್ಧರಿಸಿದ ದರಕ್ಕೆ ಅಪ್ರುವಲ್ ನೀಡಲಾಗುತ್ತದೆ ಎಂದರೆ ಸರಿಯಲ್ಲ. ಎರಡು ಪಕ್ಷಗಾರರ ಮಾತುಕತೆಯ ನಂತರ ದರ ನಿರ್ಧರಿಸಿ, ವರ್ಕ ಆರ್ಡರ ನೀಡಲಾಗುತ್ತದೆ ಎಂದರೆ ಸರಿ. ನಿಪಿ-3 ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಯಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿದ ನಂತರ ಅದನ್ನು ಪ್ರತಿವಾದಿಗೆ ನೀಡುತ್ತೇವೆ ಎಂದರೆ ಸರಿ. ಈ ದಾವೆಯಲ್ಲಿ ಪ್ರತಿವಾದಿ ನೀಡಿರುವ ಕೋಟೇಶನನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ವಸ್ತುಗಳನ್ನು ಸರಬರಾಜು ಮಾಡುವಾಗ ಡೆಲಿವರಿ ನೋಟ್ ಸಿದ್ದಪಡಿಸಬೇಕು ಎಂದರೆ ಸರಿ. ವಸ್ತುವನ್ನು ಪ್ರತಿವಾದಿ ಪಡೆದ ನಂತರ ಸದರಿ ಡೆಲಿವರಿ ನೋಟಗೆ ಅವರ ಸಹಿ ಪಡೆಯಲಾಗುತ್ತದೆ ಎಂದರೆ ಸರಿ. ನಿಪಿ-3 ದಾಖಲೆಯಲ್ಲಿ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ಸದರಿ ದಾಖಲೆಗೆ ಸಂಬಂಧಪಟ್ಟ ಡೆಲಿವರಿ ನೋಟನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಹೇಳಿರುವ ಯಾವುದೇ ವಸ್ತುಗಳನ್ನು ವಾದಿಯು ಪ್ರತಿವಾದಿಗೆ ಸರಬರಾಜು ಮಾಡಿಲ್ಲ ಮತ್ತು ಈ ಕಾರಣದಿಂದ ನಿಪಿ-3 ಟ್ಯಾಕ್ಸ ಇನವೈಸ ದಾಖಲೆಗಳಲ್ಲಿ ಪ್ರತಿವಾದಿಯ ಸಹಿ ಇಲ್ಲ ಮತ್ತು ಅದಕ್ಕೆ ಸಂಬಂಧಪಟ್ಟ ಡೆಲಿವರಿ ನೋಟ ದಾಖಲೆಗಳನ್ನು ವಾದಿಯು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

**6.** ನಿಪಿ-**2** ಮತ್ತು ನಿಪಿ-**3** ದಾಖಲೆಗಳು ಕಂಪ್ಯೂಟರ್ ಜನರೇಟೆಡ್ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳಿಗೆ ಸಂಬಂಧಪಟ್ಟ ಕಂಪ್ಯೂಟರಗಳಲ್ಲಿ ನಾನು ಕೆಲಸ ಮಾಡುವುದಿಲ್ಲ ಎಂದರೆ ಸರಿ. ನಿಪಿ-**2** ಮತ್ತು ನಿಪಿ-**3** ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿಸಿಕೊಂಡು ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.